ಶ್ರೀ ಜಿ.ಹೆಚ್.ಅಶ್ವತ್ಥರೆಡ್ಡಿ :- ಮಾನ್ಯ ಅಧ್ಯಕ್ಷರೇ, ಈ ರಸ್ತೆಗಳನ್ನು ಕೂಡ ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಅಥಾರಿಟಿ ಮುಖಾಂತರ ತೆಗೆದುಕೊಳ್ಳುವುದಕ್ಕೆ 3 ಕೋಟಿ 90 ಲಕ್ಷ ರೂಪಾಯಿಗಳಾಗುತ್ತದೆ. ಈ ರಸ್ತೆಗಳಿಗಾಗಿ ಈಗ 21 ಲಕ್ಷ ರೂಪಾಯಿಗಳನ್ನು ಏನು ಖರ್ಚು ಮಾಡಿದ್ದಾರೆ ಇದು ಏತಕ್ಕೂ ಸಾಲುವುದಿಲ್ಲ. ಆದರಿಂದ ರಸ್ತೆಗಳನ್ನು ಪೂರ್ಣವಾಗಿ ರಿಪೇರಿ ಮಾಡುತ್ತೇವೆಂದರೆ ಸಾಧ್ಯವಾಗುವುದಿಲ್ಲ. ಅಲ್ಲಿ ಟ್ರಾಫಿಕ್ ಬಹಳ ಜಾಸ್ತಿ ಇದೆ. ಭಾರಿ ದೊಡ್ಡ ವಾಹನಗಳು ಅಲ್ಲಿ ಹೋಗುತ್ತಿರುತ್ತವೆ. ಸಿಮೆಂಟ್, ಕಲ್ಲುಬಂಡೆ ಮುಂತಾದುವು ಅಲ್ಲಿಯೇ ಪಾಸ್ ಆಗಬೇಕಾಗಿರುವುದರಿಂದ ಆ ರಸ್ತೆಗಳು ಕೆಟ್ಟು ಹೋಗಿವೆ. ಆ ರಸ್ತೆಗಳನ್ನು ರಿಪೇರಿ ಮಾಡಬೇಕಾದರೆ 3 ಕೋಟಿ 90 ಲಕ್ಷ ರೂಪಾಯಿ ಬೇಕಾಗಿರುತ್ತದೆ. 1990-91ಮತ್ತು 1991-92ನೇ ಸಾಲಿನಲ್ಲಿ ಸುಮಾರು21 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅಲ್ಲಿ ಬೇರೆ ಕಾಮಗಾರಿಗಳು ಸಹ ನಡೆಯುತ್ತಿವೆ. ಅಲ್ಲಿ ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಅಥಾರಿಟಿ ಮುಖಾಂತರ ಕೆಲಸಗಳು ನಡೆಯುತ್ತಿವೆ. ಅಲ್ಲಿ ಈಗಾಗಲೇ ಕಂಟ್ರಾಕ್ಟ್ ಕೊಟ್ಟಿದ್ದಾರೆ. ಇನ್ನು ಒಂದು ವರ್ಷದಲ್ಲಿ ಆ ರಸ್ತೆಗಳನ್ನು ಪೂರ್ಣ ರಿಪೇರಿ ಮಾಡಿಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ, ಮಾಡಿಸುತ್ತೇವೆ ಎಂದು ಸನ್ಮಾನ್ಯ ಸದಸ್ಯರಿಗೆ ಹೇಳುತ್ತೇನೆ. ಅವರು ಪ್ರತಿ ಸಾರಿ ಯಾವುದೇ ಪ್ರಶ್ನೆಯನ್ನು ಕೇಳಿದರೂ ಅಲ್ಲಿ ಅವ್ಯವಹಾರ ನಡೆಯುತ್ತಿದೆ, ಅಲ್ಲಿ ಯಾರು ಕೆಲಸ ಮಾಡುತ್ತಿದ್ದಾರೆ ? ಆ ರಸ್ತೆಯ ಮೇಲಿರತಕ್ಕ ಮೇಸ್ತ್ರಿ ಯಾರು ? ಆ ಟೈಮ್‌ನಲ್ಲಿ ಯಾರಿದ್ದರು ಇದನ್ನೆಲ್ಲ ಅವರು ಕೇಳುತ್ತಾರೆ. ಅದ್ದರಿಂದ ನಾನು ಅದರ ಬಗ್ಗೆ ಮುಖ್ಯ ಇಂಜಿನಿಯರ್‌ರವರಿಗೆ ವಿವರ ಕಳುಹಿಸಲು ಅವರಿಗೆ ಬರೆದಿದ್ದೇನೆ. ಅವರು ಆ ಡೀಟೈಲ್ಸ್ ಕಳುಹಿಸಿದ ನಂತರ ಅವರಿಗೆ ಒದಗಿಸಿ ಕೊಡುತ್ತೇನೆ.

ತಡೆಹಿಡಿಯಲಾದ ಪ್ರಶ್ನೋತ್ತರಗಳು

ಅಧ್ಯಕ್ಷರು : ಮಾನ್ಯ ಶ್ರೀ ಹೆಚ್.ವಿಶ್ವನಾಥ್, ಸದಸ್ಯರು ಗೈರುಹಾಜರಿದ್ದಾರೆ. ಮಾನ್ಯ ಇದಿನಬ್ಬರವರು; ಪ್ರತಾಪಚಂದ್ರ ಶೆಟ್ಟಿಯವರು ಕೆ.ಸಿದ್ದಯ್ಯನವರು, ಸದಸ್ಯರುಗಳು ಗೈರು ಹಾಜರಿ ಇದ್ದಾರೆ.

ಶ್ರೀ ಬಾಬುರಾವ್ ಚವಾಣ್ : ಮಾನ್ಯ ಅಧ್ಯಕ್ಷರೆ, ನನ್ನದೊಂದು ಪ್ರಶ್ನೆಯಿದೆ.

ಅಧ್ಯಕ್ಷರು: ನಾನು ನಿಮ್ಮನ್ನು ಕರೆದಾಗ ನೀವು ಸಭೆಯಲ್ಲಿರಲಿಲ್ಲ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಕಬಿನಿ ಎರಡನೇ ಹಂತದ ಯೋಜನೆ.

(2323) ಶ್ರೀ ಎಂ.ಮಹದೇವ್ (ನಂಜನಗೂಡು):- ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ ಕಬಿನಿ ಎರಡನೇ ಹಂತದ ಯೋಜನೆಯನ್ನು ಸರ್ಕಾರ ಯಾವಾಗ ಪ್ರಾರಂಭಿಸುತ್ತದೆ ?

ಆ ಕಾವೇರಿ ಜಲಾನಯನ ಅಭಿವೃದ್ಧಿಗೆ ನಿಗದಿ ಪಡಿಸಿದ್ದ ಮೊತ್ತದಲ್ಲಿ ಕಬಿನಿ ಜಲಾನಯನ ಎರಡನೇ ಹಂತ ಪೂರೈಸಲು ಎಷ್ಟು ಹಣವನ್ನು ನೀಡಲಾಗಿದೆ ?

ಇ ಕಬಿನಿ ಎರಡನೇ ಹಂತದ ಯೋಜನೆಯಿಂದ ಯಾವ ಯಾವ ತಾಲ್ಲೂಕಿಗೆ ಅನುಕೂಲವಾಗುತ್ತದೆ ಹಾಗೂ ಎಷ್ಟು ಎಕರೆಗೆ ನೀರಾವರಿ ಸೌಲಭ್ಯ ದೊರೆಯುತ್ತದೆ ?

ಈ ಎರಡನೇ ಹಂತದ ಜಲಾನಯನದ ಕಾಮಗಾರಿ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು , ಹಾಗೂ ಕಾರ್ಯಗತಗೊಳಿಸುವಲ್ಲಿ ವಿಳಂಬವಾಗಲು ಕಾರಣಗಳೇನು ?

ಶ್ರೀ ಮಲ್ಲಾರಿಗೌಡ ಎಸ್.ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು)

ಅ ಈ ಯೋಜನೆಯು ಇನ್ನೂ ಅನ್ವೇಷಣಾ ಹಂತದಲ್ಲಿದೆ.

ಆ ಕಾವೇರಿ ಜಲಾನಯನ ಅಭಿವೃದ್ಧಿಗೆ ಹಣವನ್ನು ನಿಗದಿ ಪಡಿಸಿಲ್ಲ. ಕಬಿನಿ ಯೋಜನೆಗೆ 1991-92ನೇ ಸಾಲಿನಲ್ಲಿ 15.00 ಕೋಟಿ ರೂ.ಗಳನ್ನು ಮತ್ತು 1992-93ನೇ ಸಾಲಿನಲ್ಲಿ 23.00 ಕೋಟಿ ರೂ.ಗಳನ್ನು ನೀಡಲಾಗಿದೆ.

ಇ ಕಬಿನಿ ಯೋಜನೆಯ ಎರಡನೇ ಹಂತದಲ್ಲಿ ನೀರಾವರಿ ಸೌಲಭ್ಯ ಪಡೆಯುವ ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತೆ ಇವೆ. (ತಾತ್ಕಾಲಿಕ):

1.	ಹೆಗ್ಗಡದೇವನಕೋಟೆ	2300	ಹೆಕ್ಟೇರುಗಳು
2.	ಚಾಮರಾಜನಗರ	19141	"
3.	ಗುಂಡ್ಲುಪೇಟೆ	818	"
4.	ನಂಜನಗೂಡು	17361	"
5.	ಟಿ.ನರಸೀಪುರ	750	"
6.	ಯಲಂದೂರು	1800	"
	ಒಟ್ಟು	42170	ಹೆಕ್ಟೇರುಗಳು.

ಈ ಈ ಯೋಜನೆಯು ಇನ್ನೂ ಅನ್ವೇಷಣಾ ಹಂತದಲ್ಲಿದೆ.

ಕೋಲಾರ ಜಿಲ್ಲೆಯಲ್ಲಿ ದಶಲಕ್ಷ ಬಾವಿ ಯೋಜನೆ.

(1897)ಶ್ರೀ ಎಂ.ನಾರಾಯಣಸ್ವಾಮಿ (ಬೇತಮಂಗಲ):- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ.

ಅ 1991-92ನೇ ಸಾಲಿನಲ್ಲಿ ದಶಲಕ್ಷ ಬಾವಿ ಯೋಜನೆಯಡಿಯಲ್ಲಿ ಕೋಲಾರ ಜಿಲ್ಲೆಯಲ್ಲಿ ಖರ್ಚು ಮಾಡಿದ ಹಣವೆಷ್ಟು?

ಆ ಮೇಲ್ಕಂಡ ಯೋಜನೆಯಡಿ ಕೋಲಾರ ಜಿಲ್ಲೆಯಲ್ಲಿ ಯಾವ ಯಾವ ಸ್ಥಳಗಳಲ್ಲಿ ಬಾವಿಗಳನ್ನು ತೋಡಲಾಗಿದೆ (ತಾಲ್ಲೂಕುವಾರು ಮಾಹಿತಿ ನೀಡುವುದು) ;

ಇ ಕೋಲಾರ ಜಿಲ್ಲೆಯಲ್ಲಿ ಮೇಲ್ಕಂಡ ಯೋಜನೆಯಡಿ ಮಾರ್ಚ್ 1992ರ ಅಂತ್ಯದೊಳಗಾಗಿ ಖರ್ಚು ಮಾಡಬಹುದಾದ ಹಣವೆಷ್ಟು ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು ಕಂದಾಯ ಸಚಿವರು):-

ಅ 1991-92ನೇ ಸಾಲಿನಲ್ಲಿ ಫೆಬ್ರವರಿ 92ರ ಅಂತ್ಯದವರೆಗೆ ದಶಲಕ್ಷ ಬಾವಿಗಳ ಯೋಜನೆಯಡಿ ಕೋಲಾರ ಜಿಲ್ಲೆಯಲ್ಲಿ ಒಟ್ಟಾರೆ ರೂ.221.590 ಲಕ್ಷವನ್ನು ವ್ಯಯ ಮಾಡಲಾಗಿದೆ.

ಆ ಕೋಲಾರ ಜಿಲ್ಲೆಯ ಬಾಗೇಪಲ್ಲಿ ಹಾಗೂ ಬಂಗಾರಪೇಟೆ ತಾಲ್ಲೂಕುಗಳಲ್ಲಿ ತೋಡಲಾಗಿರುವ ತೆರೆದ ಬಾವಿಗಳ ಸ್ಥಳಗಳನ್ನು ಲಗತ್ತು ತ:ಖ್ತೆಯಲ್ಲಿ ಒದಗಿಸಲಾಗಿದೆ.

ಇ 1991-92ನೇ ಸಾಲಿಗೆ ಒಟ್ಟಾರೆ ಲಭ್ಯವಿರುವ ಅನುದಾನ ರೂ. 387.233 ಲಕ್ಷಗಳ